ಇವನು ಒಳ ಹೋಗುತ್ತಾನೆ. ಆ ಡ್ರೈವರನನ್ನು ಏಕೆ ಜೊತೆ ಕರೆದುಕೊಳ್ಳಲಿಲ್ಲ ಎನ್ನುವ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಬೆಲ್ ಬಾರಿಸಿದ ತಕ್ಷಣ ಒಬ್ಬ ದಡೂತಿ ಶಿಂಧೆಯನ್ನು ಸ್ವಾಗತಿಸುತ್ತಾ ಒಳ ಕರೆದುಕೊಂಡು ಹೋಗುವಾಗ ಅಲ್ಲಿಯ ಕೆಂಪು ಕಲ್ಲಿನ ಹಾಸಿಗೆಯ ಮೇಲೆ ಚಪ್ಪಲಿ ಸಹಿತ ನಡೆಯಬೇಕೊ ನಡೆಯಬಾರದೊ ಎನ್ನುವ ಗೊಂದಲದಲ್ಲಿ ಚಪ್ಪಲಿ ಹೊರಗೆ ಬಿಟ್ಟು ಬರಬೇಕಿತ್ತು ಎಂದುಕೊಳ್ಳುತ್ತಿರುವಾಗಲೇ ಶಿಂಧೆ ಬೂಟ್ ಹಾಕಿಕೊಂಡು ರುಬಾಬ್ ಸಿರಿ ನಡೆದು ಹೋಗುತ್ತಾನೆ. ಅವನ ಹಿಂದೆ ತಾನು ಹೋಗುತ್ತಾನೆ. ಸೋಫಾದ ಮೇಲೆ ಇಬ್ಬರು ವ್ಯಕ್ತಿಗಳು ಶಿಂಧೆಗಾಗಿ ಕಾಯುತ್ತಾ ಕೂತಿರುತ್ತಾರೆ. ಅವರ ಬಟ್ಟೆಗಳನ್ನು ನೋಡಿ ಇವನಿಗೆ ಎಂಥಾ ಬಟ್ಟೆ ಹಾಕಿಕೊಂಡು ಬಂದೆ ಎನ್ನಿಸುತ್ತದೆ.

"ಯೇ ಮೇರಾ ಬಚಪನ್ ಕಾ ದೋಸ್ತ್. ಇಲ್ಲೇ ಕಂಪನಿಯಲ್ಲಿ ಕಾರಕೂನ ಆಗಿದ್ದಾನೆ. ಅಕೌಂಟ್‌ನಲ್ಲಿ ಎತ್ತಿದ ಕೈ," ಎನ್ನುತ್ತಾ ಶಿಂಧೆಯ ಪರಿಚಯ ಮಾಡಿಕೊಡುತ್ತಾನೆ. ಎಲ್ಲರೂ ಕೈಕುಲುಕುತ್ತಿರಬೇಕಾದರೆ ಒಬ್ಬನ ಬೆರಳಿನ ಬಂಗಾರದ ಉಂಗುರದ ಸ್ಪರ್ಶದಿಂದಾಗಿ ಅವನಿಗೆ ವಿಚಿತ್ರ ಅನುಭವ ಆಗುತ್ತದೆ. ಅವನ ಕಣ್ಣುಗಳು ಆ ಉಂಗುರದ ಮೇಲೆಯೇ ನೆಟ್ಟು ಬಿಡುತ್ತವೆ.

ಟೀಪಾಯಿ ಮೇಲೆ ಪಾರ್ಟಿಯ ತಯಾರಿ ಪ್ರಾರಂಭವಾಗಿದೆ. ರೂಮಿನ ಒಳಗೆ ಸ್ಲಿವ್‌ಲೆಸ್ ಬ್ಲೌಸ್ ಹಾಕಿಕೊಂಡ ಚಂದನೆಯ ಸುಂದರ ಹೆಂಗಸು ಒಳಹೊರಗೆ ಓಡಾಡುತ್ತಿದ್ದಾಳೆ. ಗಾಜಿನ ಗ್ಲಾಸು, ಪಾತ್ರೆಗಳನ್ನು ಇಟ್ಟಿದ್ದಾರೆ. ಮನೆಯ ನೌಕರ ಕರೀದ ಮೀನು, ಬೇಯಿಸಿದ ತತ್ತಿ, ಚಿಕನ್ ಫ್ರೈ ತುಂಬಿರುವ ತಟ್ಟೆಯನ್ನು ತಂದು ಅವರ ಮುಂದೆ ಇಡುತ್ತಾನೆ. ಅವುಗಳನ್ನು ನೋಡಿದ ತಕ್ಷಣ ಬಾಯಲ್ಲಿ ನೀರು ತನ್ನಿಂದ ತಾನೇ ಒಸರತೊಡಗುತ್ತದೆ. ತಟ್ಟೆಯ ಮಧ್ಯೆ ಬಂಗಾರ ವರ್ಣದ ದಾರು ತುಂಬಿದ ಗ್ಲಾಸು ಮತ್ತು ಬರ್ಫಿನ ತುಂಡುಗಳು ಇರುತ್ತವೆ. ಶಿಂಧೆ ಅವನಿಗೆ ದಾರು ಗ್ಲಾಸು ತೆಗೆದುಕೊಳ್ಳಲು ಸನ್ನೆ ಮಾಡುತ್ತಾನೆ.

ದಾರು ತುಂಬಿದ ಗ್ಲಾಸನ್ನು ಸಾವಕಾಶವಾಗಿ ತುಟಿಗೆ ಇಟ್ಟುಕೊಳ್ಳುತ್ತಲೇ ಅವನ ಶರೀರದಲ್ಲೊಂದು ವಿಚಿತ್ರ ಅನುಭವವಾಗುತ್ತದೆ. ಸಾವಕಾಶವಾಗಿ ಪಾರ್ಟಿ ರಂಗೇರುತ್ತದೆ. ಅಲ್ಲಿದ್ದವರು ಕುಡಿಯುವುದು ಜಾಸ್ತಿ, ತಿನ್ನುವುದು ಕಡಿಮೆ. ಆದರೆ ಇವನು ಮಾತ್ರ ಕುಡಿಯುವುದು ಕಡಿಮೆ, ತಿನ್ನುವುದು ಜಾಸ್ತಿ. ಶಿಂಧೆ ಮತ್ತು ಅವನ ಗೆಳೆಯರೆಲ್ಲಾ ಬಿಜನೆಸ್ ಬಗ್ಗೆ ಮಾತನಾಡುವುದರಲ್ಲಿ ತಲ್ಲೀನರಾಗಿರುತ್ತಾರೆ. ಇವನಿಗೆ ಅದರ ತಳ ಬುಡ ಅರ್ಥವಾಗುವುದಿಲ್ಲ. ಶಿಂಧೆ ಕೆಲಸ ಮಾಡುವ ಆದಿವಾಸಿ ಭಾಗದಲ್ಲಿ ಅತ್ತರಿನ ಒಂದು ಫ್ಯಾಕ್ಟ್ರಿ ತೆಗೆಯುವ ವಿಚಾರವಾಗಿ ಅವರು ಮಾತನಾಡುತ್ತಿದ್ದಾರೆ. ಆ ಭಾಗದಲ್ಲಿ ಅತ್ತರಿಗೆ ಬೇಕಾದ ಸುವಾಸನೆಯ ಹುಲ್ಲು ಬೆಳೆಯಲು ಬೇಕಾದ ಉತ್ತಮ ವಾತಾವರಣವಿದೆ; ಶಿಂಧೆಯನ್ನು ಹಿಡಿದುಕೊಂಡರೆ ಅಲ್ಲಿನ ಜಮೀನು ಹುಲ್ಲು ಬೆಳೆಯಲು ನಮಗೆ ಸಿಗುತ್ತದೆ ಎಂದು ಮಾತನಾಡುತ್ತಿದ್ದಾರೆ. ಈ ಮಾತುಕತೆ ಯಾಕೋ ಅವನಿಗೆ ಹಿಡಿಸುವುದಿಲ್ಲ. ಅವನು ಗ್ಲಾಸಿನೊಂದಿಗೆ ಕಿಟಕಿಯ ಹತ್ತಿರ ಬಂದು ಶಹರದ ಇಡಿಯಾದ ಚಿತ್ರಣವನ್ನು ಮೊದಲ ಬಾರಿ ನೋಡುತ್ತಾನೆ. ಇಡೀ ಶಹರ ವಿದ್ಯುತ್ ಬೆಳಕಿನಲ್ಲಿ ಮುಳಗಿ ಹೋಗಿದೆ. ಇಲ್ಲಿ ಸಾವು ಬರುವುದೇ ಇಲ್ಲ ಎನ್ನಿಸುತ್ತದೆ.

ಪಾರ್ಟಿ ಮುಗಿಯುತ್ತಾ ಬಂದಂತೆ ಅವನಿಗೆ ನಶೆ ಏರಿ ಜೋಲಿ ಹೊಡೆಯುತ್ತಿರುತ್ತಾನೆ. ಕೆಳಗೆ ಇಳಿದು ಶಿಂಧೆಯ ಸಹಾಯ ಪಡೆದು ಸ್ಟೇಷನ್ನಿನ ಕಡೆ ನಡೆಯಲು ಪ್ರಾರಂಭಿಸುತ್ತಾನೆ. ನನಗೆ ಮಾತ್ರ ಈ ಪಾರ್ಟಿಯಲ್ಲಿ ಕಿಕ್ ಏರಿತು ಎನ್ನುತ್ತಾ ಸಮುದ್ರದ ಗುಂಟ ನಡೆದು ಹೋಗುತ್ತಿರಬೇಕಾದರೆ ತಂಪು ಗಾಳಿ ತಾಗಿ ಅವನ ಶರೀರದಲ್ಲೊಂದು ರೋಮಾಂಚನ ಉಂಟಾಗುತ್ತದೆ. ಆ ರೊಮಾಂಚನದಲ್ಲಿ ತನ್ನ ಹೆಂಡತಿಯ ನೆನಪು ಬರತೊಡಗುತ್ತದೆ. ಎರಡು ತಿಂಗಳಾಯಿತು ನಾನು ನನ್ನ ಹೆಂಡತಿಯನ್ನು ಸೇರಿಯೇ ಇಲ್ಲ. ಮೂಡೇ ಬರುತ್ತಿಲ್ಲ. ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ. ಹೆಂಡತಿಯ ಬೆಳ್ಳಗಿನ ಶರೀರ ಅವನ ಕಣ್ಣ ಮುಂದೆ ಪದೇ ಪದೇ ಬರತೊಡಗುತ್ತದೆ. ಸಮುದ್ರದ ಅಲೆಗಳ ಸಂಗೀತ